

ಹೋದುದರಿಂದಾಗಿ, ಹುಡುಗನ ತಂದೆ–ತಾಯಿಗೆ ಕೂಡ ಆ ವಿಮಾನದಲ್ಲಿ ಪ್ರಯಾಣಿಸುವುದು ಸಾಧ್ಯವಾಗಿರಲಿಲ್ಲ. ವಿಮಾನ ಪ್ರವೇಶಿಸುವಾಗ ಭಯಗೊಂಡಿದ್ದ ಬಾಲಕನಿಂದ ಉಳಿದ ಪ್ರಯಾಣಿಕರಿಗೆ ತೊಂದರೆ ಆಗಬಹುದೆನ್ನುವ ಕಾರಣದಿಂದಾಗಿ ಇಂಡಿಗೊ ಸಿಬ್ಬಂದಿ ಅನುಮತಿ ನಿರಾಕರಿಸಿದ್ದರು. ಆ ನಿರ್ಧಾರವನ್ನು ಸಹ ಪ್ರಯಾಣಿಕರು ವಿರೋಧಿಸಿದರು ಎನ್ನುವುದು ಸಾರ್ವಜನಿಕ ಜೀವನದಲ್ಲಿ ಮಾನವೀಯತೆ ಇನ್ನೂ ಉಳಿದಿದೆ ಎನ್ನುವುದು ಸಮಾಧಾನ ಉಂಟುಮಾಡುವ ಸಂಗತಿ. ಆದರೆ, ಬಾಲಕ ಹಾಗೂ ಆತನ ಪೋಷಕರಿಗೆ ಪ್ರಯಾಣಕ್ಕೆ ಅವಕಾಶ ಕಲ್ಪಿಸುವಂತೆ ಸಹಪ್ರಯಾಣಿಕರು ಮಾಡಿಕೊಂಡ ಮನವಿಗೆ ವೈಮಾನಿಕ ಸಿಬ್ಬಂದಿ ಸ್ಪಂದಿಸಲಿಲ್ಲ. ಪ್ರಯಾಣಿಕರ ಒತ್ತಾಯದ ನಂತರವೂ ತಮ್ಮ ನಿರ್ಧಾರ ಬದಲಿಸದ ವಿಮಾನದ ಸಿಬ್ಬಂದಿಯದು ಕೆಟ್ಟ ಹಟವೇ ಹೊರತು ಸೌಜನ್ಯಯುತ ನಡವಳಿಕೆಯಲ್ಲ.

ವಿಮಾನಗಳಲ್ಲಿ ಹಾಗೂ ವಿಮಾನ ನಿಲ್ದಾಣಗಳಲ್ಲಿ ಅಂಗವಿಕಲರನ್ನು ಒರಟಾಗಿ ನಡೆಸಿಕೊಂಡಿರುವುದು ಇದು ಮೊದಲೇನಲ್ಲ. ಪ್ರಸಿದ್ಧ ಭರತನಾಟ್ಯ ಕಲಾವಿದೆ ಸುಧಾ ಚಂದ್ರನ್ ಅವರು, ವಿಮಾನ ನಿಲ್ದಾಣಗಳಲ್ಲಿ ತಮ್ಮ ಕೃತಕ ಕಾಲನ್ನು ಬಿಚ್ಚಿ ತೋರಿಸುವಂತೆ ಒತ್ತಾಯಿಸುವಾಗ ಉಂಟಾಗುವ ಹಿಂಸೆ ಮತ್ತು ನೋವಿನ ಕುರಿತು ಸಾಮಾಜಿಕ ಜಾಲತಾಣಗಳ ಮೂಲಕ ಪ್ರಧಾನಿ ನರೇಂದ್ರ ಮೋದಿ ಅವರಿಗೆ ದೂರು ಸಲ್ಲಿಸಿದ್ದರು. ಅಂಗವಿಕಲ ವ್ಯಕ್ತಿಗಳಿಗೆ ವಿಶೇಷ ಗುರುತಿನ ಚೀಟಿ ನೀಡುವಂತೆಯೂ ಒತ್ತಾಯಿಸಿದ್ದರು. ಗಾಲಿ ಕುರ್ಚಿಯ ಬ್ಯಾಟರಿ ಸಂಪರ್ಕ ಕಡಿತಗೊಳಿಸದ ಕಾರಣಕ್ಕಾಗಿ ತಮ್ಮನ್ನು ವಿಮಾನವೇರಲು ಅವಕಾಶ ಕೊಡಲಿಲ್ಲವೆಂದು ಬೆಂಗಳೂರಿನ ನಿವೃತ್ತ ಪ್ರಾಧ್ಯಾಪಕರೊಬ್ಬರು ದೂರಿದ್ದರು. ಎಂಬತ್ತು ವರ್ಷದ ಅಂಗವಿಕಲ ಮಹಿಳೆಯೊಬ್ಬರನ್ನು ತಪಾಸಣೆಯ ವೇಳೆ ವಿವಸ್ತ್ರಗೊಳಿಸದ ಪ್ರಕರಣ ಇತ್ತೀಚೆಗಷ್ಟೇ ಗುವಾಹಟಿ ವಿಮಾನ ನಿಲ್ದಾಣದಲ್ಲಿ ನಡೆದಿದೆ. ಇಂಥ ಘಟನೆಗಳು ಅಂಗವಿಕಲರ ಬಗ್ಗೆ ಸಾರ್ವಜನಿಕ ಕ್ಷೇತ್ರಗಳು ಸಂವೇದನೆ ಕಳೆದುಕೊಂಡಿರುವುದಕ್ಕೆ ಉದಾಹರಣೆಯಂತಿವೆ.

ಮಹಿಳೆಯರು, ಮಕ್ಕಳು, ಹಿರಿಯ ನಾಗರಿಕರ ಬಗ್ಗೆ ಸಮಾಜ ಸಹಾನುಭೂತಿಯಿಂದ ನೋಡುವುದರ ಜೊತೆಗೆ ಅವರ ಘನತೆಗೆ ಕುಂದಾಗದಂತೆ ನಾಗರಿಕ ಸಮಾಜ ನಡೆದುಕೊಳ್ಳಬೇಕಲ್ಲವೆ? ನಾಗರಿಕತೆಯ ಪ್ರತಿಷ್ಠಿತ ತಾಣಗಳೆಂದು ಬಿಂಬಿಸಿಕೊಳ್ಳುವ ವಿಮಾನ ನಿಲ್ದಾಣಗಳಂತಹ ಸ್ಥಳಗಳಲ್ಲೇ ಅಂಗವಿಕಲರನ್ನು ಗೌರವದಿಂದ ನಡೆಸಿಕೊಳ್ಳುವುದು ಸಾಧ್ಯವಾಗದೆ ಹೋದರೆ, ಉಳಿದ ಸ್ಥಳಗಳಲ್ಲಿ ಆ ಸೌಜನ್ಯವನ್ನು ನಿರೀಕ್ಷಿಸುವುದು ಹೇಗೆ?

ಅಂಗವಿಕಲ ಬಾಲಕನಿಗೆ ಪ್ರಯಾಣಿಸಲು ಅನುಮತಿ ನಿರಾಕರಿಸಿದ ಘಟನೆಯನ್ನು ನಾಗರಿಕ ವಿಮಾನಯಾನ ನಿರ್ದೇಶನಾಲಯ ಗಂಭೀರವಾಗಿ ಪರಿಗಣಿಸಿ ತನಿಖೆ ನಡೆಸಲು ಮುಂದಾಗಿರುವುದು ಸ್ವಾಗತಾರ್ಹ. ಮಕ್ಕಳ ಹಕ್ಕುಗಳ ರಕ್ಷಣೆಗಾಗಿ ಇರುವ 'ರಾಷ್ಟ್ರೀಯ ಆಯೋಗ'ದ (ಎನ್‌ಸಿಪಿಸಿಆರ್) ಅಧ್ಯಕ್ಷರು, 'ಇಂಡಿಗೊ' ವಿರುದ್ಧ ಎಫ್‌ಐಆರ್ ದಾಖಲಿಸುವಂತೆ ಜಾರ್ಖಂಡ್ ಪೊಲೀಸರಿಗೆ ಸೂಚಿಸಿದ್ದಾರೆ. ಈ ಕಾನೂನು ಕ್ರಮಗಳು ರಾಂಚಿಯಲ್ಲಿ ನಡೆದಂಥ ಪ್ರಕರಣಗಳು ಮರುಕಳಿಸದಿರಲು ಎಚ್ಚರಿಕೆಯ ಗಂಟೆಯಾಗುತ್ತವೆಂದು



ಭಾವಿಸಬಹುದೇನೊ? ಪ್ರಕರಣದ ಬಗ್ಗೆ ವಿಷಾದ ವ್ಯಕ್ತಪಡಿಸಿರುವ 'ಇಂಡಿಗೊ' ಸಂಸ್ಥೆ, ಬಾಲಕ ಮತ್ತು ಆತನ ಪೋಷಕರಿಗೆ ಹೋಟೆಲ್‌ನಲ್ಲಿ ವಾಸ್ತವ್ಯದ ವ್ಯವಸ್ಥೆ ಮಾಡಿ ಮರುದಿನ ಪ್ರಯಾಣಕ್ಕೆ ವ್ಯವಸ್ಥೆ ಮಾಡಿಕೊಟ್ಟಿದೆ. ಬಾಲಕನಿಗೆ ವಿದ್ಯುತ್ ಚಾಲಿತ ಗಾಲಿ ಕುರ್ಚಿಯನ್ನು ಕೊಡುವುದಾಗಿಯೂ ಹೇಳಿದೆ. ತಪ್ಪನ್ನು ತಿದ್ದಿಕೊಳ್ಳುವ ನಿಟ್ಟಿನಲ್ಲಿ ಸಂಸ್ಥೆ ನಡೆಸಿರುವ ಪ್ರಯತ್ನಗಳು ಸರಿಯಾಗಿವೆ. ಆದರೆ, ಇಂಥ ಪ್ರಕರಣಗಳನ್ನು ಪ್ರತ್ಯೇಕವಾಗಿ ನೋಡದೆ, ಒಟ್ಟಾರೆ ಸಮಾಜವನ್ನು ಅಂಗವಿಕಲರಿಗೆ ಸ್ನೇಹಿಯಾಗಿ ರೂಪುಗೊಳಿಸಲು ಪ್ರೇರಣೆಯಾಗಬೇಕು. ಮುಖ್ಯವಾಗಿ, ಸಾರ್ವಜನಿಕರೊಂದು ಪ್ರತಿ ನಿತ್ಯ ಒಡನಾಡುವ ಅಧಿಕಾರಿಗಳನ್ನು ಮಾನವೀಯಗೊಳಿಸಬೇಕು.

ಅಂಗವಿಕಲ ವ್ಯಕ್ತಿಗಳ ಸಬಲೀಕರಣಕ್ಕಾಗಿ ವಿಶ್ವಸಂಸ್ಥೆ ರೂಪಿಸಿರುವ ಒಡಂಬಡಿಕೆಯನ್ನು ಭಾರತ ಸರ್ಕಾರವೂ ಒಪ್ಪಿಕೊಂಡಿದ್ದು, 'ಅಂಗವಿಕಲ ವ್ಯಕ್ತಿಗಳ ಹಕ್ಕುಗಳ ಅಧಿನಿಯಮ–2016' ರೂಪಿಸಿದೆ. ಅಂಗವಿಕಲರಿಗೆ ತಾರತಮ್ಯ ಮಾಡದಿರುವುದು, ಸಮಾನ ಅವಕಾಶಗಳನ್ನು ಕಲ್ಪಿಸುವುದಕ್ಕೆ ಅಧಿನಿಯಮ ಒತ್ತುನೀಡಿದೆ. ಅಂಗವಿಕಲರು ಸಮಾಜದಲ್ಲಿ ಸಂಪೂರ್ಣವಾಗಿ ಮತ್ತು ಪರಿಣಾಮಕಾರಿಯಾಗಿ ಭಾಗವಹಿಸಲು ಅವಕಾಶಗಳನ್ನು ಕಲ್ಪಿಸಬೇಕು ಎಂದು ಅಧಿನಿಯಮ ಹೇಳುತ್ತದೆ. ಆದರೆ, ಬಹುತೇಕ ಸಾರ್ವಜನಿಕ ಸ್ಥಳಗಳಲ್ಲಿ ಅಂಗವಿಕಲರಿಗೆ ಪೂರಕವಾದ ಸವಲತ್ತುಗಳಲ್ಲೇ ಇಲ್ಲ. ನಗರದ ರಸ್ತೆಗಳಂತೂ ಕೈಕಾಲು ಗಟ್ಟಿಯಾಗಿರುವ ಪಾದಚಾರಿಗಳ ಸಂಚಾರಕ್ಕೇ ಸೂಕ್ತವಾಗಿಲ್ಲದಿರುವಾಗ, ಅಂಗವಿಕಲರು ಆ ರಸ್ತೆಗಳಲ್ಲಿ ಸಂಚರಿಸುವುದು ಮತ್ತಷ್ಟು ದುಸ್ತರ.

ಸವಲತ್ತುಗಳ ಕೊರತೆಯ ಜೊತೆಗೆ ಅಧಿಕಾರಿಗಳು ಒರಟಾಗಿ ವರ್ತಿಸುವುದು ಕೂಡ ಅಂಗವಿಕಲರ ಮನಸ್ಸನ್ನು ಗಾಸಿಗೊಳಿಸುತ್ತದೆ. ಸಾರ್ವಜನಿಕ ವಲಯದಲ್ಲಿ ಕಾರ್ಯ ನಿರ್ವಹಿಸುವ ಸಿಬ್ಬಂದಿಗೆ, ಅಂಗವಿಕಲರ ಬಗ್ಗೆ ಸಹಾನುಭೂತಿ ಮತ್ತು ಕಾಳಜಿಯಿಂದ ವರ್ತಿಸುವಂತೆ ತರಬೇತಿ ಅಗತ್ಯವಿರುವಂತಿದೆ.

ನಾಗರಿಕತೆಯ ಬಗ್ಗೆ, ಸಂಸ್ಕೃತಿ–ಮಾನವೀಯತೆಯ ಬಗ್ಗೆ ದೊಡ್ಡ ದೊಡ್ಡ ಮಾತುಗಳನ್ನು ಆಡುತ್ತೇವೆ. ಆದರೆ, ಸಹ ಮನುಷ್ಯನಿಗೆ ಸಹಜವಾಗಿ ತೋರಬೇಕಾದ ಸ್ಪಂದನವನ್ನೇ ಅನೇಕ ಸಂದರ್ಭಗಳಲ್ಲಿ ಮರೆತುಬಿಡುತ್ತೇವೆ. ಮನುಷ್ಯ ಮತ್ತೊಬ್ಬ ಮನುಷ್ಯನಿಗೆ ನೆರವಿನ ಕೈಚಾಚುವುದಕ್ಕೆ ಹಿಂಜರಿಯುವಂತಾದರೆ, ನಾಗರಿಕತೆಗೆ ಅರ್ಥವಾದರೂ ಏನು? ತೀರಾ ದುರ್ಬಲ ಮನುಷ್ಯನೂ ಸಹಜವಾಗಿ ಬದುಕುವಂತೆ ಅವಕಾಶ ಮತ್ತು ಅನುಕೂಲಗಳನ್ನು ಕಲ್ಪಿಸುವುದು ವೈಯಕ್ತಿಕ ಜವಾಬ್ದಾರಿಯೂ ಹೌದು ಸಮಾಜದ ಕರ್ತವ್ಯವೂ ಹೌದು, ಅಲ್ಲವೇ?

ಪ್ರತಿಕ್ರಿಯಿಸಿ: **feedback@sudha.co.in**